**All India Radio: Bangalore**
**National Bulletin In Kannada**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**05.09.2026 19.35 hrs**

**<><><*><><<>**

ಮುಖ್ಯಾಂಶಗಳು

**೧. ಗುಣಮಟ್ಟದ ಶಿಕ್ಷಣದಿಂದ ವಿಕಸಿತ ಭಾರತ ನಿರ್ಮಾಣ ಸಾಧ್ಯ - ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಮತ**

**೨. ಸಮಯೋಚಿತ ನ್ಯಾಯ ವಿತರಣೆ ಇಂದಿನ ಅಗತ್ಯ - ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಪ್ರತಿಪಾದನೆ**

**೩. ನೇಪಾಳ ಪ್ರವಾಹ: ಮೃತಪಟ್ಟವರ ಸಂಖ್ಯೆ ಒಂದು ಸಾವಿರದ ೩೪೪ಕ್ಕೆ ಏರಿಕೆ, ಗುರುತು ಪತ್ತೆಯಾಗದ ಮೃತದೇಹಗಳ ಡಿಎನ್‌ಎ ಪರೀಕ್ಷೆ**

**೪. ಮಹಿಳಾ ಟಿ-೨೦ ಏಷ್ಯಾಕಪ್ ಕ್ರಿಕೆಟ್: ಗುಂಪು ಎ ಪಂದ್ಯದಲ್ಲಿಂದು ಭಾರತ-ಪಾಕಿಸ್ತಾನ ಮುಖಾಮುಖಿ**

**<><><*><><<>**

ಗುಣಮಟ್ಟದ ಶಿಕ್ಷಣದಿಂದ ಮಾತ್ರ ವಿಕಸಿತ ಭಾರತ ನಿರ್ಮಾಣ ಸಾಧ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಶಿಕ್ಷಕರ ದಿನದಂದು ನವದೆಹಲಿಯಲ್ಲಿ ೨೦೨೬ ರ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಶಿಕ್ಷಕರನ್ನು ಗೌರವಿಸುವ ಸಮಾಜವು ಸರಿಯಾದ ರೀತಿಯಲ್ಲಿ ಪ್ರಗತಿಪರ ಸಮಾಜವಾಗಿದೆ. ಶೈಕ್ಷಣಿಕ ಶ್ರೇಷ್ಠತೆ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ರಾಷ್ಟ್ರದ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದರು. ಜ್ಞಾನ ಶಕ್ತಿಯಾಗುವುದರ ಜೊತೆಗೆ ಭಾರತವನ್ನು ವಿಶ್ವದ ಕೌಶಲ್ಯ ರಾಜಧಾನಿಯಾಗಿ ಸ್ಥಾಪಿಸುವುದು ದೇಶದ ಆದ್ಯತೆಯಾಗಿದೆ. ವ್ಯಕ್ತಿಗಳು ಸ್ವತಂತ್ರವಾಗಿ ಯೋಚಿಸಲು, ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ರಾಷ್ಟ್ರದ ಪ್ರಗತಿಗೆ ಅರ್ಥಪೂರ್ಣವಾಗಿ ಕೊಡುಗೆ ನೀಡಲು ಶಿಕ್ಷಣ ಅಧಿಕಾರ ನೀಡುತ್ತದೆ. ಸಮರ್ಪಿತ ಶಿಕ್ಷಕರು ಮುಂಚೂಣಿಯಲ್ಲಿರುವ ರಾಷ್ಟ್ರ ನಿರ್ಮಾಣಕಾರರು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದಿಸಿದರು. ೨೬

ರಾಜ್ಯಗಳು, ಏಳು ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಸರ್ಕಾರದ ಆರು ಸಂಸ್ಥೆಗಳಿಂದ ೪೮ ಆಯ್ದ ಶಾಲಾ ಶಿಕ್ಷಕರಿಗೆ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಗಳನ್ನು ರಾಷ್ಟ್ರಪತಿ ಮುರ್ಮು ಪ್ರದಾನ ಮಾಡಿದರು. ಇದೇ ವೇಳೆ ಅವರು ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಪಾಲಿಟೆಕ್ನಿಕ್‌ಗಳ ೨೧ ಶಿಕ್ಷಕರು ಮತ್ತು ಅಧ್ಯಾಪಕರಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಕೇಂದ್ರ ಶಿಕ್ಷಣ ಸಚಿವ ಪ್ರಲ್ಹಾದ್ ಜೋಶಿ, ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವರಾದ ಜಯಂತ್ ಸಿಂಗ್ ಮತ್ತು ಡಾ. ಸುಕಾಂತ ಮಜುಂದಾರ್ ಉಪಸ್ಥಿತರಿದ್ದರು.

<>><><*><><<>

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಆರೋಗ್ಯಕರ ಭಿನ್ನಾಭಿಪ್ರಾಯ ಮತ್ತು ಚರ್ಚೆಯ ಸಂಸ್ಕೃತಿಯ ಮಹತ್ವವನ್ನು ಒತ್ತಿ ಹೇಳಿದರು. ನವದೆಹಲಿಯಲ್ಲಿ ನಡೆಯುತ್ತಿರುವ ಬ್ರಿಕ್ಸ್ ಮುಖ್ಯ ನ್ಯಾಯಮೂರ್ತಿಗಳ ಸಭೆಯಲ್ಲಿ ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಮತ್ತು ಪಾಲುದಾರ ರಾಷ್ಟ್ರಗಳ ನಿಯೋಗಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಸಮಯೋಚಿತ ನ್ಯಾಯ ವಿತರಣೆ ಇಂದಿನ ಅಗತ್ಯ ಎಂದು ಪ್ರತಿಪಾದಿಸಿದರು. ನಳಂದ ವಿಶ್ವವಿದ್ಯಾಲಯವು ಒಂದು ಕಾಲದಲ್ಲಿ ಅತ್ಯಂತ ಶ್ರೇಷ್ಠ ಶೈಕ್ಷಣಿಕ ಕೇಂದ್ರವಾಗಿತ್ತು. ಅಲ್ಲಿ ಪ್ರಪಂಚದಾದ್ಯಂತದ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಯಾವುದೇ ತಾರತಮ್ಯ ಅಥವಾ ಅಡೆತಡೆಗಳಿಲ್ಲದೆ ಪ್ರವೇಶ ದೊರೆಯುತ್ತಿತ್ತು ಎಂಬುದನ್ನು ಸ್ಮರಿಸಿದ ಅವರು, ಬ್ರಿಕ್ಸ್ ಅನ್ನು ಜೀವಂತ ನಳಂದ ವಿಶ್ವವಿದ್ಯಾಲಯ ಎಂದೂ ಕರೆಯಬೇಕು ಎಂದು ಹೇಳಿದರು. ದೇಶಗಳ ನಡುವಿನ ವ್ಯಾಪಾರ ಬೆಳೆದಂತೆ, ವ್ಯವಹಾರಗಳಿಗೆ ವಿವಿಧ ಕಾನೂನು ಮತ್ತು ವಾಣಿಜ್ಯ ಸಂಸ್ಕೃತಿಗಳಲ್ಲಿ ಪರಿಣಾಮಕಾರಿ, ವಿಶ್ವಾಸಾರ್ಹ ಮತ್ತು ಕಾರ್ಯಸಾಧ್ಯವಾದ ವಿವಾದ-ಪರಿಹಾರ ಕಾರ್ಯವಿಧಾನಗಳು ಬೇಕಾಗುತ್ತವೆ. ಮಧ್ಯಸ್ಥಿಕೆ ಸಂಸ್ಥೆಗಳ ನಡುವಿನ ಸಹಕಾರ, ವೃತ್ತಿಪರ ತರಬೇತಿ, ಬಹುಭಾಷಾ ಸಾಮರ್ಥ್ಯ ಹಾಗೂ ನ್ಯಾಯಾಧೀಶರು, ಮಧ್ಯವರ್ತಿಗಳು, ವಕೀಲರ ನಡುವೆ ಸಂವಾದ ಬಲಪಡಿಸುವಂತೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಕರೆ ನೀಡಿದರು.

<>><><*><><<>

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ನಾಳೆಯಿಂದ ಅಸ್ಸಾಂ, ಮೇಘಾಲಯ, ಮಣಿಪುರ ಮತ್ತು ಅರುಣಾಚಲ ಪ್ರದೇಶಕ್ಕೆ ನಾಲ್ಕು ದಿನಗಳ ಭೇಟಿ ನೀಡಲಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ ಅವರು, ಐತಿಹಾಸಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ಮಹತ್ವದ ಸಂಸ್ಥೆಗಳಿಗೆ ಭೇಟಿ ನೀಡುವುದರ ಜೊತೆಗೆ ಹಲವಾರು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾರ್ವಜನಿಕ

ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಮೊದಲ ದಿನ, ಉಪರಾಷ್ಟ್ರಪತಿಗಳು, ಅಸ್ಸಾಂನ ಗುವಾಹಟಿಯಲ್ಲಿರುವ ಗೀತಾನಗರ ಕಾಲೇಜಿನ ಸುವರ್ಣ ಮಹೋತ್ಸವ ಸಂಭ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಅವರು ಗುವಾಹಟಿಯ ಶಂಕರದೇವ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಸೋಮವಾರ ಅವರು, ಗುವಾಹಟಿ ವಿಶ್ವವಿದ್ಯಾಲಯದಲ್ಲಿ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ವಿಶ್ವವಿದ್ಯಾಲಯದ ಸಮಾವೇಶ ಕೇಂದ್ರದಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ನಾಗರಿಕರೊಂದಿಗೆ ಸಂವಾದ ನಡೆಸಲಿದ್ದಾರೆ. ಇದೇ ೮ ರಂದು ಉಪರಾಷ್ಟ್ರಪತಿಗಳು, ಇಂಫಾಲ್‌ಗೆ ಭೇಟಿ ನೀಡಲಿದ್ದಾರೆ. ಅವರು ಮೊಯಿರಾಂಗ್‌ನಲ್ಲಿರುವ ಐಎನ್‌ಎ ವಸ್ತುಸಂಗ್ರಹಾಲಯ ಮತ್ತು ಇಂಫಾಲ್‌ನ ಸೈನಿಕ್ ಶಾಲೆಯನ್ನು ಭೇಟಿ ಮಾಡಲಿದ್ದಾರೆ. ನಂತರ ಅವರು ಇಟಾನಗರಕ್ಕೆ ತೆರಳಲಿದ್ದಾರೆ. ತಮ್ಮ ಭೇಟಿಯ ಕೊನೆಯ ದಿನದಂದು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು, ಅರುಣಾಚಲ ಪ್ರದೇಶ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ನೈದಾರ್ ನಾಮ್ಲೋ, ಇಟಾನಗರದ ಜವಾಹರಲಾಲ್ ನೆಹರು ರಾಜ್ಯ ವಸ್ತುಸಂಗ್ರಹಾಲಯ ಹಾಗೂ ಶ್ರವಣ ಮತ್ತು ದೃಷ್ಟಿಹೀನರಿಗಾಗಿ ಡೊನ್ಯಿ ಪೊಲೊ ಮಿಷನ್ ಶಾಲೆಗೆ ಭೇಟಿ ನೀಡಲಿದ್ದಾರೆ.

**<>><><*><><<>**

ಮಹಾರಾಷ್ಟ್ರದ ಮೇಲ್‌ಘಾಟ್ ಮತ್ತು ಪೆಂಚ್ ಹುಲಿ ಅಭಯಾರಣ್ಯಗಳಲ್ಲಿ ಕೃತಕವಾಗಿ ಸಾಕಣೆ ಮಾಡಿ ಬೆಳೆಸಿದ ರಣಹದ್ದುಗಳನ್ನು ನೈಸರ್ಗಿಕ ಆವಾಸ ಸ್ಥಾನಕ್ಕೆ ಬಿಡುಗಡೆ ಮಾಡುವ ಯೋಜನೆ ಅತ್ಯಂತ ಯಶಸ್ವಿಯಾಗಿದೆ. ಬಾಂಬೆ ನೈಸರ್ಗಿಕ ಇತಿಹಾಸ ಸೊಸೈಟಿ-ಬಿಎನ್‌ಎಚ್‌ಎಸ್ ನೀಡಿರುವ ಮಾಹಿತಿ ಪ್ರಕಾರ, ೨೦೨೫ ರ ಡಿಸೆಂಬರ್ ಮತ್ತು ೨೦೨೬ ರ ಜನವರಿಯಲ್ಲಿ ಬಿಡುಗಡೆ ಮಾಡಲಾಗಿದ್ದ ೨೯ ರಣಹದ್ದುಗಳಲ್ಲಿ ಶೇಕಡಾ ೭೮ ರಷ್ಟು ರಣಹದ್ದುಗಳು ಜೀವಂತವಾಗಿ ಉಳಿದುಕೊಂಡಿದ್ದು, ಆಶಾದಾಯಕ ಪ್ರಗತಿ ಕಂಡುಬಂದಿದೆ.

ಸೂಕ್ತ ಪರಿಸರದಲ್ಲಿ ರಣಹದ್ದುಗಳನ್ನು ಮರಳಿ ಸಂರಕ್ಷಿಸುವ ಯೋಜನೆಗೆ ಈ ಫಲಿತಾಂಶಗಳು ಹೊಸ ಭರವಸೆ ನೀಡಿವೆ.

**<>><><*><><<>**

ನೇಪಾಳದಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ ಒಂದು ಸಾವಿರದ ೩೪೪ ಕ್ಕೆ ಏರಿಕೆಯಾಗಿದೆ. ಎಂಟು ಪೀಡಿತ ಜಿಲ್ಲೆಗಳಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಸುಮಾರು ಐದು ಸಾವಿರ ಜನರು ಕಾಣೆಯಾಗಿದ್ದಾರೆ. ಇಲ್ಲಿಯವರೆಗೆ ೧೩ ಸಾವಿರಕ್ಕೂ ಹೆಚ್ಚು

ಜನರನ್ನು ರಕ್ಷಿಸಲಾಗಿದೆ. ನುವಾಕೋಟ್ ಜಿಲ್ಲೆಯಲ್ಲಿ, ನಾಲ್ಕು ಅಂತಸ್ತಿನ ಮನೆಯ ಅವಶೇಷಗಳ ಅಡಿಯಲ್ಲಿ ೧೦ ದಿನಗಳ ಕಾಲ ಸಿಲುಕಿದ್ದ ೪೦ ವರ್ಷದ ಮಹಿಳೆಯನ್ನು ಜೀವಂತವಾಗಿ ರಕ್ಷಿಸಲಾಗಿದೆ. ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಬಲಿಪಶುಗಳನ್ನು ಗುರುತಿಸಲು ಡಿಎನ್‌ಎ ಪರೀಕ್ಷೆ ನಡೆಸಲು ನೇಪಾಳ ಪ್ರಾರಂಭಿಸಿದೆ. ಇಲ್ಲಿಯವರೆಗೆ, ಕೇವಲ ೯೪ ಶವಗಳನ್ನು ಮಾತ್ರ ಗುರುತಿಸಲಾಗಿದೆ ಮತ್ತು ಅವರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ. ದುರಂತದಲ್ಲಿ ಚೀನಾದ ಕನಿಷ್ಠ ೨೧ ಜನರು ಸಾವನ್ನಪ್ಪಿದ್ದಾರೆ. ಟಿಬೆಟ್‌ನಲ್ಲಿ ೫೦೦ ಕ್ಕೂ ಹೆಚ್ಚು ಜನರು ಕಾಣೆಯಾಗಿದ್ದಾರೆ. ನೇಪಾಳದ ಎಂಟು ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಪತ್ತೆಯಾಗಿರುವ ಒಟ್ಟು ಶವಗಳಲ್ಲಿ ೭೫೮ ವಯಸ್ಕರು, ೮೫ ಮಕ್ಕಳು ಮತ್ತು ೫೦೧ ಶವಗಳನ್ನು ಹೊರತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಏತನ್ಮಧ್ಯೆ, ನೇಪಾಳ, ಭಾರತ ಮತ್ತು ಚೀನಾದ ರಕ್ಷಣಾ ತಂಡಗಳು ಪ್ರವಾಹ ಪೀಡಿತ ಜಲವಿದ್ಯುತ್ ಯೋಜನೆಗಳಲ್ಲಿ ಸುರಂಗದೊಳೊಳಗೆ ಸಿಲುಕಿರುವ ಜನರನ್ನು ರಕ್ಷಿಸಲು ಜಂಟಿ ಕಾರ್ಯಾಚರಣೆ ಮುಂದುವರಿಸಿವೆ.

**<><><*><><<>**

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಇಂದು ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಮತ್ತು ಇತರ ಹಿರಿಯ ಅಧಿಕಾರಿಗಳೊಂದಿಗೆ ಅಂತರ-ಸಚಿವಾಲಯದ ವರ್ಚುವಲ್ ಸಭೆ ನಡೆಸಿ 'ಸ್ವಚ್ಛತಾ ಹಿ ಸೇವಾ ೨೦೨೪' ರ ಸಿದ್ಧತೆಗಳನ್ನು ಪರಿಶೀಲಿಸಿದರು. ಸಾಮಾಜಿಕ ಜಾಲತಾಣದಲ್ಲಿ ಸಚಿವ ಮನೋಹರ್ ಲಾಲ್ ಅವರು, ಈ ಅಭಿಯಾನ ಒಂಬತ್ತನೇ ಆವೃತ್ತಿಯನ್ನು ಆಚರಿಸುತ್ತಿದೆ. ನಾಗರಿಕರು ಸ್ವಯಂ ಪ್ರೇರಿತವಾಗಿ ಅಭಿಯಾನದಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗವಹಿಸಿ ಮತ್ತು 'ಸ್ವಚ್ಛತಾ ಹಿ ಸೇವೆ'ಯನ್ನು ನಿಜವಾದ ಜನ ಆಂದೋಲನವನ್ನಾಗಿ ಮಾಡಬೇಕೆಂದು ಕರೆ ನೀಡಿದರು. 'ಸ್ವಚ್ಛತಾ ಹಿ ಸೇವಾ ೨೦೨೪' ಅಭಿಯಾನವನ್ನು ಈ ತಿಂಗಳ ೧೭ ರಿಂದ ಅಕ್ಟೋಬರ್ ೨ ರವರೆಗೆ ಆಚರಿಸಲಾಗುವುದು.

**<><><*><><<>**

ಬಿಹಾರದ ಹಲವಾರು ಭಾಗಗಳಲ್ಲಿ ಪ್ರವಾಹವು ಸಾಮಾನ್ಯ ಜೀವನದ ಮೇಲೆ ಪರಿಣಾಮ ಬೀರುತ್ತಿದೆ. ಗಂಗಾ ಮತ್ತು ಇತರ ಹಲವಾರು ಪ್ರಮುಖ ನದಿಗಳು ವಿವಿಧ ಸ್ಥಳಗಳಲ್ಲಿ ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಸಂತ್ರಸ್ತರಿಗೆ ಸಹಾಯ ಮಾಡಲು ಆಡಳಿತವು ಯುದ್ಧೋಪಾದಿಯಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ತೀವ್ರಗೊಳಿಸಿದೆ. ಪಾಟ್ನಾದಲ್ಲಿ, ಗಾಂಧಿ ಘಾಟ್,

ಬಂಕಾ ಘಾಟ್ ಮತ್ತು ಪಂಡಾರಕ್‌ನಲ್ಲಿ ಗಂಗಾ ನದಿಯ ನೀರಿನ ಮಟ್ಟವು ಅತ್ಯಧಿಕ ಪ್ರವಾಹ ಮಟ್ಟಕ್ಕಿಂತ ಹೆಚ್ಚಾಗಿ ಹರಿಯುತ್ತಿದೆ. ಸಮುದಾಯ ಅಡುಗೆ ಮನೆಗಳ ಮೂಲಕ ಇಲ್ಲಿಯವರೆಗೆ ಒಂದು ಲಕ್ಷ ೨೦ ಸಾವಿರಕ್ಕೂ ಹೆಚ್ಚು ಜನರಿಗೆ ಆಹಾರ ಒದಗಿಸಲಾಗಿದೆ.

<>><><*><><<>

ಬೊಜ್ಜನ್ನು ನಿಭಾಯಿಸಲು ಉತ್ತಮ ಮಾರ್ಗವೆಂದರೆ ತೂಕ ಹೆಚ್ಚಾಗುವುದನ್ನು ತಡೆಯುವುದಾಗಿದೆ ಎಂದು ಏಮ್ಸ್ ನಿರ್ದೇಶಕ ಡಾ.ನಿಖಿಲ್ ಟಂಡನ್ ಸಲಹೆ ನೀಡಿದ್ದಾರೆ. ನವದೆಹಲಿಯಲ್ಲಿ ಇಂದು ಏಮ್ಸ್ ಬೊಜ್ಜು ಶೃಂಗಸಭೆ ೨೦೨೨ ಅನ್ನು ಉದ್ಘಾಟಿಸಿದ ಅವರು, ಒಬ್ಬ ವ್ಯಕ್ತಿಯು ಒಮ್ಮೆ ತೂಕ ಹೆಚ್ಚಿಸಿಕೊಂಡರೆ, ತೂಕ ಇಳಿಸುವುದು ಅತ್ಯಂತ ಕಷ್ಟಕರ. ಚಿಕ್ಕ ವಯಸ್ಸಿನಿಂದಲೇ ಬೊಜ್ಜು ತಡೆಗಟ್ಟುವ ಕ್ರಮ ಅಗತ್ಯ ಎಂದು ಹೇಳಿದರು. ಬೊಜ್ಜು ಜೈವಿಕ ಅಂಶಗಳಿಂದ ಮಾತ್ರವಲ್ಲದೆ ನಡವಳಿಕೆ, ಪರಿಸರ ಮತ್ತು ಸಾಂಸ್ಕೃತಿಕ ಅಂಶಗಳಿಂದ ಕೂಡ ಪ್ರಭಾವಿತವಾಗಿರುತ್ತದೆ. ಆಹಾರ ಮತ್ತು ಉತ್ತಮ ಜೀವನಶೈಲಿಯನ್ನು ಪ್ರಾರಂಭದಿಂದಲೇ ಮಕ್ಕಳಲ್ಲಿ ಬೆಳೆಸಬೇಕು ಎಂದು ಡಾ.ನಿಖಿಲ್ ಟಂಡನ್ ಸಲಹೆ ನೀಡಿದರು.

<>><><*><><<>

ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಮಹಿಳಾ ಟಿ-೨೦ ಏಷ್ಯಾಕಪ್ ಕ್ರಿಕೆಟ್‌ನ ಅಂತಿಮ ಗುಂಪು- ಎ ಪಂದ್ಯದಲ್ಲಿ ಭಾರತ, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.  ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ. ಭಾರತ ತಂಡ ತನ್ನ ಹಿಂದಿನ ಎರಡು ಪಂದ್ಯಗಳಲ್ಲಿ ಥೈಲ್ಯಾಂಡ್ ಮತ್ತು ಹಾಂಗ್‌ಕಾಂಗ್ ವಿರುದ್ಧ ಭರ್ಜರಿ ಜಯಗಳಿಸಿದ ನಂತರ ಈಗಾಗಲೇ ಸೆಮಿಫೈನಲ್‌ನಲ್ಲಿ ಸ್ಥಾನ ಪಡೆದುಕೊಂಡಿದೆ. ಭಾರತ ತಂಡ, ಈಗ ತನ್ನ ಗೆಲುವಿನ ಓಟವನ್ನು ಕಾಯ್ದುಕೊಳ್ಳಲು ಮತ್ತು ಗುಂಪು ಹಂತವನ್ನು ಪರಿಪೂರ್ಣ ದಾಖಲೆಯೊಂದಿಗೆ ಮುಗಿಸಲು ಪ್ರಯತ್ನಿಸಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>**